# ವಾಟ್ಸ್ಆ್ಯಪ್‌ಗೆ ಹೊಸ ಪ್ರತಿಸ್ಪರ್ಧಿ

■ ಶಶಿಕುಮಾರ್ ಸಿ.

## ಹೊಸ 'ಸಿಗ್ನಲ್'

ಈಚೆಗಷ್ಟೇ ಪರಿಷ್ಕೃತ ಪ್ರೈವೆಸಿ ಪಾಲಿಸಿಯನ್ನು ಪ್ರಕಟಿಸಿದ ವಾಟ್ಸ್ಆ್ಯಪ್ ತನ್ನ ಬಳಕೆದಾರರಿಂದ ದೊಡ್ಡ ಪೆಟ್ಟನ್ನೇ ತಿಂದಿದೆ. 'ತನ್ನಲ್ಲಿರುವ ಬಳಕೆದಾರರ ಮಾಹಿತಿಯನ್ನು ಫೇಸ್‌ಬುಕ್‌ನೊಂದಿಗೆ ಹಂಚಿಕೊಳ್ಳಲಾಗುತ್ತದೆ' ಎಂದು ವಾಟ್ಸ್ಆ್ಯಪ್ ಹೇಳಿದ ಬಳಿಕ ಸಾಕಷ್ಟು ಮಂದಿ ಬಳಕೆದಾರರು ವಾಟ್ಸ್ಆ್ಯಪ್ ಅನ್ನು ತೊರೆದು ವಾಟ್ಸ್ಆ್ಯಪ್‌ನಂತಹ ಸೇವೆಯನ್ನು ಕಲ್ಪಿಸುವ ಸಿಗ್ನಲ್ ಆ್ಯಪ್‌ನತ್ತ ಜನ ಮುಖ ಮಾಡತೊಡಗಿದ್ದಾರೆ. ಆ್ಯಪಲ್ ಸ್ಟೋರ್ ಹಾಗೂ ಗೂಗಲ್‌ನ ಪ್ಲೇ ಸ್ಟೋರ್ ಎರಡರಲ್ಲೂ ಈ ಸಿಗ್ನಲ್ ಆ್ಯಪ್‌ನ ಡೌನ್‌ಲೋಡ್ ಮಾಡಿಕೊಳ್ಳುವವರ ಸಂಖ್ಯೆ ಈಚೆಗೆ ಗಣನೀಯವಾಗಿ ಏರಿಕೆಯಾಗುತ್ತಿದೆ.

'ಸಿಗ್ನಲ್ ಆ್ಯಪ್' ವಾಟ್ಸ್ಆ್ಯಪ್‌ಗಿಂತ ಹೇಗೆ ಭಿನ್ನ ಎಂಬ ಪ್ರಶ್ನೆ ಹಲವರನ್ನು ಕಾಡಲಿದೆ. ಸಿಗ್ನಲ್ ಆ್ಯಪ್ ಸಹ ವಾಟ್ಸ್ಆ್ಯಪ್‌ನಂತೆ ಚಾಟಿಂಗ್, ಫೋಟೊ ಹಾಗೂ ವಿಡಿಯೊ ಶೇರಿಂಗ್ ಆ್ಯಪ್. ಜೊತೆಗೆ ಧ್ವನಿ ಕರೆ ಹಾಗೂ ವಿಡಿಯೊ ಕರೆಯನ್ನೂ ಇದರಲ್ಲಿ ಮಾಡಬಹುದು. ಕೇವಲ ಐದು ಮಂದಿಯೊಂದಿಗೆ ಗ್ರೂಪ್ ವಿಡಿಯೊ ಕರೆಯನ್ನು ಮಾಡಬಹುದಾಗಿದೆ. ಈ ಆ್ಯಪ್‌ನಲ್ಲಿ ನೀವು ಮಾಡುವ ಚಾಟ್ ಮತ್ತು ಕರೆಗಳು ಎಂಡ್ ಟು ಎಂಡ್ ಎನ್ಕ್ರಿಪ್ಟೆಡ್ ಆಗಿರುತ್ತವೆ. ಅಂದರೆ ಚಾಟ್ ಹಾಗೂ ಕರೆಯ ಮಾಹಿತಿಯು ಗೌಪ್ಯವಾಗಿ ಇರುತ್ತದೆ.

ವಾಟ್ಸ್ಆ್ಯಪ್‌ನ ಸಹಸಂಸ್ಥಾಪಕರಲ್ಲಿ ಒಬ್ಬರಾದ ಬ್ರಿಯಾನ್ ಆಕ್ಟನ್, ಭಾರತದಲ್ಲಿ ಸಿಗ್ನಲ್ ಆ್ಯಪ್ ಬಳಕೆಯ ಪ್ರಮಾಣ ದಿನೇ ದಿನೇ ಹೆಚ್ಚಾಗುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದ್ದಾರೆ. 'ಭಾರತ ಅತ್ಯಂತ ವೈವಿಧ್ಯಮಯ ದೇಶ. ಹಲವು ಭಾಷೆಗಳ ಆಗರ. ಇಲ್ಲಿ ಡಿಜಿಟಲ್ ಕ್ಷೇತ್ರ ಅಗಾಧವಾಗಿ ಬೆಳೆಯುತ್ತಿದೆ. ಭಾರತಕ್ಕೇಂದೇ ಆ್ಯಪ್‌ವೊಂದನ್ನು ನಿರ್ಮಿಸಿದರೆ ಅದು ಇಡೀ ವಿಶ್ವಕ್ಕೆ ನಿರ್ಮಿಸಿದಂತೆ. ಭಾರತದಲ್ಲಿ ಸಿಗ್ನಲ್ ಆ್ಯಪ್ ಹಿಂದಿ ಸೇರಿದಂತೆ ಒಟ್ಟು 12 ಭಾಷೆಗಳಲ್ಲಿ ತನ್ನ ಸೇವೆಯನ್ನು ನೀಡುತ್ತಿದೆ' ಎಂದಿದ್ದಾರೆ ಅವರು.

### ಖಾತೆ ತೆರೆಯುವುದು ಹೇಗೆ?

ವಾಟ್ಸ್ಆ್ಯಪ್‌ನಂತೆಯೇ ಈ ಆ್ಯಪ್‌ನಲ್ಲಿಯೂ ಬಳಕೆದಾರರು ಖಾತೆಯನ್ನು ಕ್ರಿಯೇಟ್ ಮಾಡಬೇಕು. ಆ್ಯಪಲ್ ಸ್ಟೋರ್ ಅಥವಾ ಪ್ಲೇಸ್ಟೋರ್‌ನಿಂದ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಳಿಕ ಅದನ್ನು ಇನ್‌ಸ್ಟಾಲ್ ಮಾಡಿಕೊಳ್ಳಬೇಕು. ಖಾತೆ ತೆರೆಯಲು ಮೊಬೈಲ್ ಸಂಖ್ಯೆ ಅಗತ್ಯವಿರುತ್ತದೆ. ಅದನ್ನು ನಮೂದಿಸಿದೊಡನೆ ವೆರಿಫಿಕೇಷನ್ ಕೋಡ್ ನಿಮ್ಮ ಮೊಬೈಲ್‌ಗೆ ಬರುತ್ತದೆ. ಅದನ್ನು ನಮೂದಿಸಿದ ಬಳಿಕ ನಿಮ್ಮ ಖಾತೆ ಕ್ರಿಯೇಟ್ ಆಗುತ್ತದೆ. ಹಾಗೆಯೇ ನಿಮ್ಮ ಖಾತೆಗೆ ಪ್ರೊಫೈಲ್ ಫೋಟೊವನ್ನು ಅಪ್‌ಡೇಟ್ ಮಾಡಿ.







### ಡೆಸ್ಕ್‌ಟಾಪ್‌ನಲ್ಲೂ ಲಭ್ಯ

ವಾಟ್ಸ್ಆ್ಯಪ್‌ನಲ್ಲಿ ಇದ್ದಂತೆಯೇ ಈ ಆ್ಯಪ್‌ನಲ್ಲೂ ಡೆಸ್ಕ್‌ಟಾಪ್ ವರ್ಷನ್ ಇದೆ. ಡೆಸ್ಕ್‌ಟಾಪ್‌ನಲ್ಲಿ ಸಿಗ್ನಲ್ ಆ್ಯಪ್ ಅನ್ನು ಬಳಸಬೇಕಿದ್ದರೆ ನಿಮ್ಮ ಖಾತೆ ಕ್ರಿಯೇಟ್ ಆಗಿರಬೇಕು ಇಲ್ಲವಾದರೆ ಕಂಪ್ಯೂಟರ್‌ನಲ್ಲಿ ಆ್ಯಪ್ ಡೌನ್‌ಲೋಡ್ ಆಗಿರಬೇಕು ಅಥವಾ signal.org ಲಿಂಕ್‌ಗೆ ಭೇಟಿಕೊಟ್ಟರೆ ಸಿಗ್ನಲ್ ಆ್ಯಪ್ ಅನ್ನು ಮ್ಯಾಕ್ ಅಥವಾ ವಿಂಡೋಸ್ ಕಂಪ್ಯೂಟರ್‌ಗಾಗಿ ಡೌನ್‌ಲೋಡ್ ಮಾಡಲೂಬಹುದು. ಅಲ್ಲದೇ ಮೊಬೈಲ್‌ನಲ್ಲಿ ಸಿಗ್ನಲ್ ಆ್ಯಪ್ ಖಾತೆಯ ಸೆಟ್ಟಿಂಗ್ಸ್ ಅನ್ನು ಕ್ಲಿಕ್ ಮಾಡಿ. ಬಳಿಕ ತೆರೆದುಕೊಳ್ಳುವ 'ಲಿಂಕ್ ಡಿವೈಸ್' ಕ್ಲಿಕ್ಕಿಸಿದರೆ ಕಾಣುವ 'ಲಿಂಕ್ ನ್ಯೂ ಡಿವೈಸ್' ಆಯ್ಕೆಯನ್ನು ಕ್ಲಿಕ್ಕಿಸಿ. ನಂತರ ಡೆಸ್ಕ್‌ಟಾಪ್‌ನಲ್ಲಿ ಕಾಣಿಸುವ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿಯೂ ಡೆಸ್ಕ್‌ಟಾಪ್‌ನಲ್ಲಿ ಆ್ಯಪ್ ಬಳಸಬಹುದು. ■

### ವಾಟ್ಸ್ಆ್ಯಪ್ ಸ್ಪಷ್ಟೀಕರಣ

ತನ್ನ ಬಳಕೆದಾರರ ಸಂಪರ್ಕವನ್ನು ವ್ಯಾಪಾರದ ಉದ್ದೇಶಕ್ಕಾಗಿ ಫೇಸ್‌ಬುಕ್ ಅಥವಾ ಬೇರಾವುದೇ ಆ್ಯಪ್ ಜತೆಗೆ ವಾಟ್ಸ್ಆ್ಯಪ್ ಹಂಚಿಕೊಳ್ಳುವುದಿಲ್ಲ ಎಂದು ವಾಟ್ಸ್ಆ್ಯಪ್ ಸ್ಪಷ್ಟನೆ ನೀಡಿದೆ. ತನ್ನ ಹೊಸ ಸೇವಾ ನಿಯಮದ ಬಗ್ಗೆ ಈಚೆಗಷ್ಟೇ ಅಧಿಸೂಚನೆಯನ್ನು ವಾಟ್ಸ್ಆ್ಯಪ್ ಹೊರಡಿಸಿತ್ತು. ಈ ಸೇವಾ ನಿಯಮದ ಬಗ್ಗೆ ಬಳಕೆದಾರರು ಜಾಗತಿಕ ಮಟ್ಟದಲ್ಲಿ ದೊಡ್ಡ ಮಟ್ಟದ ಆಕ್ಷೇಪವನ್ನು ವ್ಯಕ್ತಪಡಿಸಿದ್ದರು. ಇದರಿಂದ ಎಚ್ಚೆತ್ತುಕೊಂಡಿರುವ ವಾಟ್ಸ್ಆ್ಯಪ್ ಪರಿಷ್ಕೃತ ಆದೇಶವನ್ನು ಹೊರಡಿಸಿ ಸ್ಪಷ್ಟನೆ




ನೀಡಿದೆ.

ಸ್ನೇಹಿತರು, ಕುಟುಂಬದ ಜತೆಗಿನ ಚಾಟ್ ಅಂದರೆ ಅದು ವೈಯಕ್ತಿಕ ಸಂದೇಶಗಳಾಗಿದ್ದು ಅವನ್ನು ವಾಟ್ಸ್ಆ್ಯಪ್ ಆಗಲೀ ಫೇಸ್‌ಬುಕ್ ಆಗಲಿ ನೋಡುವುದಿಲ್ಲ. ಕರೆಗಳನ್ನು ಆಲಿಸುವುದಿಲ್ಲ. ಈ ಸಂದೇಶಗಳು ಎಂಡ್ ಟು ಎಂಡ್ ಎನ್ಕ್ರಿಪ್ಟೆಡ್ ಆಗಿರುತ್ತವೆ. ಬಳಕೆದಾರರು ತಮ್ಮ ಸ್ನೇಹಿತರ ಜೊತೆಗೆ ಹಂಚಿಕೊಂಡ ಲೋಕೇಷನ್ ಸಹ ವಾಟ್ಸ್ಆ್ಯಪ್‌ಗೆ ಗೊತ್ತಾಗುವುದಿಲ್ಲ. ಯಾಕೆಂದರೆ ಈ ಪ್ರಕ್ರಿಯೂ ಎಂಡ್ ಟು ಎಂಡ್ ಎನ್ಕ್ರಿಪ್ಷನ್ ವ್ಯಾಪ್ತಿಗೆ ಬರುತ್ತದೆ. ಬಳಕೆದಾರರ ಸಂದೇಶ, ಕರೆಗಳ ಡೇಟಾವನ್ನು ಸಂಗ್ರಹಿಸಿಡುವುದು ಎಂದರೆ ಡೇಟಾ ಡಂಪ್ ಮಾಡುವುದು ಎಂದರ್ಥ. ಈ ಪ್ರಕ್ರಿಯೆ ಮಾಡುವುದರಿಂದ ಪ್ರೈವೆಸಿ ಮತ್ತು ಸೆಕ್ಯುರಿಟಿ ರಿಸ್ಕ್ ಹೆಚ್ಚುತ್ತದೆ. ಹೀಗಾಗಿ ಇದನ್ನೂ ಮಾಡುವುದಿಲ್ಲ ಎಂದಿದೆ ವಾಟ್ಸ್ಆ್ಯಪ್. ■